# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013-14ನೇ ಸಾಲಿಗೆ ಗ್ರಾಮೀಣ ಮತ್ತು ನಗರ ವಸತಿ ಯೋಜನೆಗಳಿಗೆ ನೀಡುವ ಹೊಸ ಗುರಿಗೆ ಸರ್ಕಾರದ ಸಹಾಯಧನವನ್ನು ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ವಇ 90 ಹೆಚ್ಎಹೆಚ್ 2012, ದಿನಾಂಕ:04.07.2012.

**ಪ್ರಸ್ತಾವನೆ:**

ಓದಲಾಗಿರುವ (1)ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿ ಬಡವರಿಗಾಗಿ ವಸತಿ ಇಲಾಖೆಯಿಂದ ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ಸರ್ಕಾರದ ಸಹಾಯಧನ ರೂ.75,000/- ಗಳಿಗೆ ನಿಗದಿಪಡಿಸಿ ಆದೇಶ ಹೊರಡಿಸಲಾಗಿತ್ತು.

ದಿನಾಂಕ:12:05.2013ರಂದು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ವಿಧಾನಸೌಧದ 3ನೇ ಮಹಡಿ ಸಮಿತಿ ಕೊಠಡಿಯಲ್ಲಿ ನಡೆದ ಉನ್ನತ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ವಸತಿ ಇಲಾಖೆಗೆ ಸಂಬಂಧಿಸಿದಂತೆ ಗ್ರಾಮೀಣ ಮತ್ತು ನಗರ ವಸತಿ ಯೋಜನೆಗಳಿಗೆ ಸರ್ಕಾರದ ಸಹಾಯಧನವನ್ನು ಹೆಚ್ಚಿಸಲು ತೀರ್ಮಾನಿಸಲಾಗಿದ್ದು, ಈ ಅಂಶವನ್ನು ದಿನಾಂಕ:13.05.2013ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದಂತೆ 2013-14ನೇ ಸಾಲಿನಲ್ಲಿ ನೀಡಲಾಗುವ ಹೊಸ ಗುರಿಗೆ ಅನ್ವಯಿಸುವಂತೆ ರೂ.75,000/-ರಿಂದ ರೂ.1,20,000/-ಕ್ಕೆ ಹೆಚ್ಚಿಸಲಾಗಿದೆ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಾದ ಇಂದಿರಾ ಆವಾಸ್ ಯೋಜನೆಗೆ ರೂ.75,000/-ರಿಂದ ರೂ.1,20,000/-ಗಳಿಗೆ ಹೆಚ್ಚಿಸಲು ತೀರ್ಮಾನಿಸಲಾಗಿದೆ.

ಸದರಿ ತೀರ್ಮಾನದಂತೆ 2013-14ನೇ ಸಾಲಿನ ಗ್ರಾಮೀಣ ವಸತಿ ಯೋಜನೆಯಡಿ (ಇಂದಿರಾ ಆವಾಸ್ ಯೋಜನೆಯನ್ನು ಹೊರತುಪಡಿಸಿ) ಪ್ರತಿ ಗ್ರಾಮ ಪಂಚಾಯ್ತಿಗೆ 20 ಮನೆಗಳಂತೆ ಹಾಗೂ ನಗರ ವಸತಿ ಯೋಜನೆಯಡಿ 20,000 ಮನೆಗಳ ಹೊಸ ಗುರಿ ನೀಡಲು ತೀರ್ಮಾನಿಸಲಾಗಿದೆ. ಅದರಂತೆ ಈ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ವಇ 39 ಹೆಚ್ಎಹೆಚ್ 2013, ಬೆಂಗಳೂರು, ದಿನಾಂಕ: 20.05.2013**

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, 2013-14ನೇ ಸಾಲಿನ ಗ್ರಾಮೀಣ ವಸತಿ ಯೋಜನೆಯಡಿ (ಇಂದಿರಾ ಆವಾಸ್ ಯೋಜನೆಯನ್ನು ಹೊರತುಪಡಿಸಿ) ಪ್ರತಿ ಗ್ರಾಮ ಪಂಚಾಯ್ತಿಗೆ 20 ಮನೆಗಳು ಹಾಗೂ ನಗರ ವಸತಿ ಯೋಜನೆಯಡಿ 20,000 ಮನೆಗಳ ಹೊಸ ಗುರಿ ನೀಡಿ, ಈ ಮನೆಗಳಿಗೆ ಸಹಾಯಧನ ಮತ್ತು ಘಟಕವೆಚ್ಚವನ್ನು ಈ ಕೆಳಗಿನಂತೆ ಹೆಚ್ಚಿಸಲು ಸರ್ಕಾರದ ಮಂಜೂರಾತಿ ನೀಡಿದೆ.

| ಯೋಜನೆ | ಸರ್ಕಾರದ ಸಹಾಯಧನ | ಘಟಕವೆಚ್ಚ | ಷರಾ |
|---|---|---|---|
| ಬಸವ ವಸತಿ ಯೋಜನೆ | ರೂ.1,20,000/- | ರೂ.1,50,000/- | ಉಳಿದ ರೂ.30,000/- ಸಾಲ ಅಥವಾ ಫಲಾನುಭವಿ ವಂತಿಗೆ. |
| ಇಂದಿರಾ ಆವಾಸ್ ಯೋಜನೆ | ರೂ.1,20,000/- (ಕೇಂದ್ರ ಸರ್ಕಾರದ ಸಹಾಯಧನ ರೂ.52,500+ರಾಜ್ಯ ಸರ್ಕಾರದಿಂದ ರೂ.67,500 ಸೇರಿದಂತೆ) | ರೂ.1,50,000/- | ಉಳಿದ ರೂ.30,000/- ಸಾಲ ಅಥವಾ ಫಲಾನುಭವಿ ವಂತಿಗೆ. |
| ವಾಜಪೇಯಿ ನಗರ ವಸತಿ ಯೋಜನೆ (ಒಂಟಿ ಮನೆ) | ರೂ.1,20,000/- | ರೂ.2,00,000/- | ನನ್ನ ಮನೆ (ISHUP) ಯೋಜನೆಯಡಿ ಅಥವಾ ಬ್ಯಾಂಕುಗಳಿಂದ ಸಾಲ ರೂ.50,000/- ಅಥವಾ ಫಲಾನುಭವಿಯ ವಂತಿಗೆ, ಕಡ್ಡಾಯ ಫಲಾನುಭವಿಯ ವಂತಿಗೆ ರೂ.30,000/-. |

ಮು.ಪು.ನೋ..

ಈ ಹೆಚ್ಚುವರಿ ಸಹಾಯಧನ ಮತ್ತು ಘಟಕವೆಚ್ಚವನ್ನು ದಿನಾಂಕ: 13.05.2013ರ ನಂತರ ಫಲಾನುಭವಿಗಳನ್ನು ಆಯ್ಕೆ ಮಾಡಿ ಮನೆ ನಿರ್ಮಾಣ ಪ್ರಾರಂಭಿಸುವ ಹೊಸ ಗುರಿಯ ಮನೆಗಳಿಗೆ ಅನ್ವಯಿಸುವಂತೆ ಮಂಜೂರಾತಿ ನೀಡಲಾಗಿದೆ. ಇದಕ್ಕೆ ತಗಲುವ ವೆಚ್ಚವನ್ನು 2013-14ನೇ ಸಾಲಿನ ಪೂರಕ ಆಯವ್ಯಯದಲ್ಲಿ ವಸತಿ ಇಲಾಖೆಯ ಯೋಜನೆಗಳ ಅನುಷ್ಠಾನಕ್ಕೆ ನೀಡಲಾಗಿರುವ ಲೆಕ್ಕ ಶೀರ್ಷಿಕೆಗಳಲ್ಲಿ ಒದಗಿಸಲಾಗುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದವರು ಸೂಕ್ತ ಸುತ್ತೋಲೆಯನ್ನು ಹೊರಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಬಿ.ಶಂಕರಪ್ಪ)
ಪೀಠಾಧಿಕಾರಿ-2, ವಸತಿ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು. ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಯೋಜನಾ ಇಲಾಖೆ.
3. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ.
4. ಎಲ್ಲಾ ಜಿಲ್ಲಾಧಿಕಾರಿಗಳು, ಎಲ್ಲಾ ವಿಭಾಗಾಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು, ಎಲ್ಲಾ ತಾಲ್ಲೂಕುಗಳ ತಹಶೀಲ್ದಾರ್‌ರವರು, ಎಲ್ಲಾ ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯ್ತಿ ಹಾಗೂ ಆಯುಕರು, ನಗರಸಭೆ ರವರಿಗೆ ಮತ್ತು ಇತರೆ ಸಂಬಂಧಪಟ್ಟ ಅಧಿಕಾರಿಗಳಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತರವರ ಮುಖಾಂತರ.
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಪ್ತ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು (**ಸಚಿವ ಸಂಪುಟ ಟಿಪ್ಪಣಿ ಸಂಖ್ಯೆ:ಸಿ.417/2013**)
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9), ವಿಧಾನಸೌಧ, ಬೆಂಗಳೂರು.
7. ಶಾಖಾ ರಕ್ಷಾಕಡತ/ಹೆಚ್ಚುವರಿ ಪ್ರತಿ.